**ಸಿವಿಲ್ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುರಪುರ**
**ಸಾ:ಸುರಪುರ**

ಓಎಸ್ ನಂ.293/2017
ಪಿ.ಡಬ್ಲ್ಯೂ 1

<u>ದಿನಾಂಕ **06-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು</u>.

ನಾನು ನನ್ನ ಮುಖ್ಯವಿಚಾರಣೆಯಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನ್ನ ಹೇಳಿಕೆಯ ಮೇರೆಗೆ ಬರೆಯಲ್ಪಟ್ಟಿದ್ದು ಸದರಿ ವಿಷಯವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದನ್ನು ನನ್ನ ಮುಖ್ಯವಿಚಾರಣೆಯಾಗಿ ಅಳವಡಿಸಿಕೊಳ್ಳಲು ವಿನಂತಿಸಿಕೊಳ್ಳುತ್ತೇನೆ.

ಸಾಕ್ಷಿಯ ಪ್ರಮಾಣ ಪತ್ರವನ್ನು ಮುಖ್ಯವಿಚಾರಣೆಯಾಗಿ ಅಳವಡಿಸಿಕೊಳ್ಳಲಾಯಿತು.

<u>**ಮುಖ್ಯವಿಚಾರಣೆ: ವಾದಿ ಪರ ಶ್ರೀ ವಿ.ಎಸ್.ಬಿ ನ್ಯಾಯಾವಾದಿಗಳಿಂದ.**</u>

ಆಸ್ತಿ ನಂ.2-22/1 ರ ಎರಡು, ನಮೂನೆ ನಂ.12 ರ ದೃಢೀಕೃತ ನಕಲುನಗಳನ್ನು ನಿಪಿ 1 ಮತ್ತು 2, ಒಂದು ಕಂದಾಯ ಪಾವತಿ ರಶೀದಿಯನ್ನು ನಿಪಿ 3, ಮುಟೇಷನ್ ರಿಜೀಸ್ಟರನ ದೃಢೀಕೃತ ನಕಲನ್ನು ನಿಪಿ 4, ಎರಡು ನಮೂನೆ ನಂ.12 ರ ದೃಢೀಕೃತ ನಕಲುಗಳನ್ನು ನಿಪಿ 5 ಮತ್ತು 6, ನಕಾಶೆಯ ದೃಢೀಕೃತ ನಕಲನ್ನು ನಿಪಿ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ. ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿರುತ್ತಾರೆ. ಮನವಿಯನ್ನು ತೀರಸ್ಕರಿಸಲಾಯಿತು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ.ಸರಿ ಇದೆ.**

**ಸಿವಿಲ್ ಹಾಗೂ ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**
**ನ್ಯಾಯಾಲಯ, ಸುರಪೂರ**